ಅ) ವಿಶೇಷ ಘಟಕ ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

ವಿಷಯ : ಹೊಸ ಅಬಕಾರಿ ನೀತಿ

1485 (2102)-ಶ್ರೀ ಯು. ಬಿ. ಬಣಕಾರ್(ಹಿರೇಕೆರೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸರ್ಕಾರದವರು ಈಗ ಜಾರಿಗೆ ತಂದಿರುವ ಹೊಸ ಅಬಕಾರಿ ನೀತಿಯ ಸಾರಾಂಶವೇನು ?

ಆ) ರಾಜ್ಯದಲ್ಲಿ ಪೂರ್ಣ ಪಾನ ನಿಷೇಧವನ್ನು ಜಾರಿಗೆ ತರಲಾಗುವುದೇ ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು)

ಅ) 1997-98ನೇ ಅಬಕಾರಿ ವರ್ಷದಿಂದ ಸಾರಾಯಿ ಮಾರಾಟದ ಹಕ್ಕನ್ನು ಹರಾಜು ವ್ಯವಸ್ಥೆ ಬದಲಾಗಿಪರವಾನಗಿಯ ಮೂಲಕ ನೀಡಲಾಗುವುದು. ಹಾಗೂ ಸಾರಾಯಿ ಮಾರಾಟ ಅಂಗಡಿಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿತ ಮಾಡಲಾಗುವುದು. ಈ ಹೊಸ ವ್ಯವಸ್ಥೆಯನ್ನು ಹೇಗೆ ಜಾರಿಗೆ ತರಬೇಕೆಂಬ ವಿವರಗಳನ್ನು ಸಚಿವ ಸಂಪುಟದ ಉಪ ಸಮಿತಿ ಪರಿಶೀಲಿಸುತ್ತಿದೆ.

ಆ) ಇಲ್ಲ

ವಿಷಯ : ಉಳ್ಳಾಲ ವಿಧಾನ ಸಭಾಕ್ಷೇತ್ರದಲ್ಲಿ ನ್ಯಾಯ ಬೆಲೆ ಅಂಗಡಿಯ ರದ್ದು

1489 (2096)-ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆಗೆಯಲು ಇರತಕ್ಕ ನಿಯಮಗಳೇನು ?

ಆ) ಉಳ್ಳಾಲ ವಿದಾನ ಸಭಾ ಕ್ಷೇತ್ರದಲ್ಲಿ ಇರುವ ನ್ಯಾಯದ ಅಂಗಡಿಗಳ ಸಂಖ್ಯೆ ಮತ್ತು ವಿವರಗಳೇನು (ಗ್ರಾಮಮಟ್ಟದಲ್ಲಿ ಪೂರ್ಣ ಅಂಶಗಳನ್ನು ನೀಡುವುದು)

ಇ) ಇತ್ತೀಚೆಗೆ ಮಂಜಿನಾಡಿ ಗ್ರಾಮದ ಗ್ರಾಮಸ್ಥರಿಗೆ ನ್ಯಾಯಬೆಲೆ ಅಂಗಡಿಯಲ್ಲಿ ಮೋಸ ಮಾಡುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?